ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ತಹಶೀಲ್ದಾರವರ ನ್ಯಾಯಾಲಯ ಕೂಡ್ಲಿಗಿ

ಸಂ/ಕಂ/ಪಹಣಿ:ವಿವಾದ/39/2015-16 ದಿನಾಂಕ: 03-08-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಜಿ.ಆರ್.ವೀರಭದ್ರಪ್ಪ ತಂದೆ ಲೇಟ್ ಜಿ.ಆರ್. ವೀರಪ್ಪ<br>2)ಜಿ.ಆರ್.ಚನ್ನಬಸಪ್ಪ ತಂದೆ ಲೇಟ್ ಜಿ.ಆರ್. ನಿಂಗಪ್ಪ<br>3)ಈಶ್ವರಮ್ಮ ಗಂಡ ಲೇಟ್ ಸಿದ್ದಲಿಂಗಪ್ಪ<br>ಸಾಸಲವಾಡ ಗ್ರಾಮ ಕೂಡ್ಲಿಗಿ ತಾಲೂಕು | ಕೆ.ಬಿ.ಗೌರಮ್ಮ ಗಂಡ ಜಿ.ಆರ್.ಚನ್ನಬಸಪ್ಪ<br>ಸಾಸಲವಾಡ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಹಿರೇಹೆಗ್ಡಾಳ್ ಗ್ರಾಮದ ಸನಂ 494/1. ವಿಸ್ತೀರ್ಣ 0-55. ಸನಂ 646/3. ವಿಸ್ತೀರ್ಣ 0-10. ಸನಂ 646/4. ವಿಸ್ತೀರ್ಣ 0-15. ಸನಂ 649/1. ವಿಸ್ತೀರ್ಣ 0-56. ಸನಂ 675ಎ. ವಿಸ್ತೀರ್ಣ 4-62. ಎಕ್ರೆ ಜಮೀನುಗಳನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹಿರೇಹೆಗ್ಡಾಳ್ ಗ್ರಾಮದ ಸನಂ 494/1. ವಿಸ್ತೀರ್ಣ 0-55. ಸನಂ 646/3. ವಿಸ್ತೀರ್ಣ 0-10. ಸನಂ 646/4. ವಿಸ್ತೀರ್ಣ 0-15. ಸನಂ 649/1. ವಿಸ್ತೀರ್ಣ 0-56. ಸನಂ 675ಎ. ವಿಸ್ತೀರ್ಣ 4-62. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಸಾಸಲವಾಡ ಗ್ರಾಮದ ಜಿ.ಆರ್.ಈಶ್ವರಮ್ಮ ಗಂಡ ಲೇಟ್ ಸಿದ್ದಲಿಂಗಪ್ಪ ಇವರು ದಿನಾಂಕ: 01-01-2015 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹಿರೇಹೆಗ್ಡಾಳ್ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 22-07-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಸಾಸಲವಾಡ ಗ್ರಾಮದ ಕೆ.ಬಿ.ಗೌರಮ್ಮ ಗಂಡ ಜಿ.ಆರ್.ಚನ್ನಬಸಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್:02/2015-16. ದಿನಾಂಕ 23-08-2015. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 09-09-2015 ರಿಂದ 03-08-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಹಿರೇಹೆಗ್ಡಾಳ್ ಗ್ರಾಮದ ಸನಂ 494/1. ವಿಸ್ತೀರ್ಣ 0-55. ಸನಂ 646/3. ವಿಸ್ತೀರ್ಣ 0-10. ಸನಂ 646/4. ವಿಸ್ತೀರ್ಣ 0-15. ಸನಂ 649/1. ವಿಸ್ತೀರ್ಣ 0-56. ಸನಂ 675ಎ. ವಿಸ್ತೀರ್ಣ 4-62. ಎಕ್ರೆ ಜಮೀನುಗಳನ್ನು ದಿನಾಂಕ 01-01-2015 ರಂದು ಪಾಲು ವಿಭಾಗದ ಪತ್ರ ಬರತೆಯಿಸಿರುತ್ತಾರೆ. ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅಳತೆ ಮಾಡಿಸಿ 11ಇ. ನಕ್ಷೇಯನ್ನು ಪಡೆದಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಹಾಗೂ 11ಇ. ನಕ್ಷೇಯಂತೆ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳನ್ನು ಪ್ರತಿವಾದಿಗಳಿಗೆ ತಿಳಿಸದೇ ಪಾಲು ವಿಭಾಗದ ಪತ್ರ ಬರೆಯಿಸಿ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಅರ್ಜಿದಾರರ ಹೆಸರಲ್ಲಿ ಖಾತಾ ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ದಿನಾಂಕ:27-07-2016 ರ ವಿಚಾರಣೆಯಲ್ಲಿ ಉಭಯರು ಹಾಜರಿದ್ದು ಉಭಯರು ರಾಜಿಯಾಗಿ ಅರ್ಜಿ ಆದೇಶ 23-01-ಸಿ.ಪಿ.ಸಿ.ಅಡಿಯಲ್ಲಿ ವಾದಿಗಳು ಮತ್ತು ಪ್ರತಿವಾದಿಗಳು ರಾಜ ಸಂಧಾನ ಪತ್ರ ಸಲ್ಲಿಸಿರುತ್ತಾರೆ. ಪ್ರತಿವಾದಿಯಾದ ಗೌರಮ್ಮ ಮತ್ತು ವಾದಿಗಳು ದಿನಾಂಕ 12-01-2015 ರಂದು ರಾಜಿ ಪತ್ರ ಪ್ರಕಾರ ಅಪ್ರತಿವಾದಿಯಾದ ಕೆ.ಬಿ.ಗೌರಮ್ಮ ಇವರು 45.000/- ಗಳನ್ನು ತೆಗೆದು ಕೊಂಡು ಯಾವುದೇ ತಕರಾರು ಇಲ್ಲವೆಂದು ಸದರಿ ಖಾತಾ ಬದಲಾವಣೆಯನ್ನು ವಾದಿಗಳ ಹೆಸರಲ್ಲಿ ಮಾಡಬಹುದೆಂದು ರಾಜಿ ಪತ್ರಕ್ಕೆ ಸಹಿ ಮಾಡಿ ಸಲ್ಲಿಸಿರುತ್ತಾರೆ.

ಪು.ತಿ.ನೋ:2

ಮೇಲಿನ ಎಲ್ಲಾ ಅಂಶಗಳನ್ನು ಗಣನಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**–:ಆದೇಶ:–**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹಿರೇಹೆಗ್ಡಾಳ್ ಗ್ರಾಮದ ಸನಂ 494/1. ವಿಸ್ತೀರ್ಣ 0–55. ಸನಂ 646/3. ವಿಸ್ತೀರ್ಣ 0–10. ಸನಂ 646/4. ವಿಸ್ತೀರ್ಣ 0–15. ಸನಂ 649/1. ವಿಸ್ತೀರ್ಣ 0–56. ಸನಂ 675ಎ. ವಿಸ್ತೀರ್ಣ 4–62. ಎಕ್ರೆ ಜಮೀನುಗಳನ್ನು ದಿನಾಂಕ 01-01–2015 ರ ಪಾಲು ವಿಭಾಗದ ಪತ್ರ ಹಾಗೂ 11ಇ. ನಕ್ಷೇ ಪ್ರಕಾರ

| ಕ್ರಸಂ | ಹೆಸರು | ಸನಂ | ವಿಸ್ತೀರ್ಣ |
|---|---|---|---|
| 1 | 2 | 3 | 4 |
| 01 | ಜಿ.ಆರ್.ವೀರಭದ್ರಪ್ಪ ತಂದೆ ಲೇಟ್ ಜಿ.ಆರ್. ವೀರಪ್ಪ | 494/1ಪೈಕಿ.<br>649/1ಪೈಕಿ.<br>675ಎಪೈಕಿ. | 0–40.<br>0–11.<br>1–32. |
| 02 | ಜಿ.ಆರ್.ಚನ್ನಬಸಪ್ಪ ತಂದೆ ಲೇಟ್ ಜಿ.ಆರ್.ನಿಂಗಪ್ಪ | 494/1ಪೈಕಿ.<br>646/3.<br>646/4.<br>675ಎಪೈಕಿ. | 0–15.<br>0–10.<br>0–15.<br>1–00. |
| 03 | ಜಿ.ಆರ್.ಈಶ್ವರಮ್ಮ ಗಂಡ ಲೇಟ್ ಸಿದ್ದಲಿಂಗಪ್ಪ. | 649/1ಪೈಕಿ.<br>675ಎಪೈಕಿ. | 0–45.<br>2–30. |

ಈ ಮೇಲಿನಂತೆ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಿಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲು ಸಹಾ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 03–08–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು ಕೂಡ್ಲಿಗಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಜಿ.ಆರ್.ವೀರಭದ್ರಪ್ಪ ತಂದೆ ಲೇಟ್ ಜಿ.ಆರ್.ವೀರಪ್ಪ. ಜಿ.ಆರ್.ಚನ್ನಬಸಪ್ಪ ತಂದೆ ಲೇಟ್ ಜಿ.ಆರ್.ನಿಂಗಪ್ಪ. ಜಿ.ಆರ್.ಈಶ್ವರಮ್ಮ ಗಂಡ ಲೇಟ್ ಸಿದ್ದಲಿಂಗಪ್ಪ. ಸಾಸಲವಾಡ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಎಂ.ನಾಗರಾಜ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಕೆ.ಬಿ.ಗೌರಮ್ಮ ಗಂಡ ಜಿ.ಆರ್.ಚನ್ನಬಸಪ್ಪ. ಸಾಸಲವಾಡ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

ದೃಢೀಕೃತ ನಕಲು

ಶಿರಸ್ತೇದಾರರು
ತಾಲ್ಲೂಕು ಕಛೇರಿ
ಕೂಡ್ಲಿಗಿ.